1. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ರಾಜ್ಯದ ನೀರಾವರಿ ಸಲಹಾ ಕಾರ್ಯದರ್ಶಿಗಳಾದ ಶ್ರೀ ಕೆ.ಸಿ. ರೆಡ್ಡಿಯವರ ರಾಜೀನಾಮೆ

ಶ್ರೀ ಜಿ.ಬಿ. ಶಿವಕುಮಾರ್ (ಕೆರಗೋಡು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ನೀರಾವರಿ ಸಲಹಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಕೆ.ಸಿ. ರೆಡ್ಡಿಯವರು ರಾಜೀನಾಮೆ ಕೊಟ್ಟಿದ್ದಾರೆ. ಅದಕ್ಕೆ ಕಾರಣ ಹೇಳಬೇಕು. ಬಹಳ ಮುಖ್ಯವಾದ ವಿಚಾರ. ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಶ್ರೀಮಾನ್ ಕೆ.ಸಿ. ರೆಡ್ಡಿಯವರು ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ. ಈ ರಾಜ್ಯದ ನೀರಾವರಿ ಯೋಜನೆಗಳಿಗೆ ತನ್ನದೇ ಆದ ಕೊಡುಗೆಯನ್ನು ಕಳೆದ ಹಲವಾರು ವರ್ಷಗಳಿಂದ ಕೊಟ್ಟುಕೊಂಡು ಬಂದಿರತಕ್ಕಂತಹ ಒಬ್ಬ ನಿಷ್ಪಾಪಂತ ಪ್ರಾಮಾಣಿಕ ಹಿರಿಯ ತಜ್ಞರನ್ನು ಉಳಿಸಿಕೊಳ್ಳತಕ್ಕಂಥದ್ದು ಸರ್ಕಾರಕ್ಕೆ ಮನಸ್ಸು ಇದೆಯೇ? ಈ ದೃಷ್ಟಿಯಿಂದ ಮೊದಲೇ ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ. ಮಾರ್ಚ್ 31ನೇ ತಾರೀಖು ಸನ್ಮಾನ್ಯ ರೆಡ್ಡಿಯವರು ಮುಖ್ಯ ಮಂತ್ರಿಯವರಿಗೆ ಈ ರೀತಿ ಪತ್ರ ಬರೆದಿದ್ದಾರೆ.

ಶ್ರೀ ಎನ್. ರಾಜಣ್ಣ : ಇನ್ನೂ 3-4 ಜನ ರಾಜೀನಾಮೆ ನೀಡಿದ್ದಾರೆ.

ಶ್ರೀ. ಜಿ.ಬಿ. ಶಿವಕುಮಾರ್ : ನೀರಾವರಿ ಕ್ಷೇತ್ರಕ್ಕೆ ಅವರ ಕೊಡುಗೆ ಏನು ಎಂಬುದನ್ನು ಇಡೀ ರಾಜ್ಯವೇ ಬಲ್ಲದಾಗಿದೆ. ಇಂಥ ಪ್ರಾಮಾಣಿಕ ಹಾಗೂ ನಿಷ್ಠಾವಂತ ಅಧಿಕಾರಿಯನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅರ್ಹತೆ ಇಲ್ಲವೆ? ಸರ್ಕಾರಕ್ಕೆ ಇಂಥವರ ಅಗತ್ಯತೆ ಇಲ್ಲವೇ ಎಂಬುದನ್ನು ನಾನು ತಿಳಿಯ ಬಯಸುತ್ತೇನೆ.

ಶ್ರೀ. ಸಿ.ಆರ್. ಸಗೀರ್ ಅಹಮದ್ : ಜನತಾ ದಳ ಸರ್ಕಾರದಲ್ಲಿ ರಾಜೀನಾಮೆ ಕೊಡುವುದೇ ಒಂದು ಸೂತ್ರವಾಗಿ ಬಿಟ್ಟಿದೆ. ಮಂತ್ರಿಗಳು ರಾಜೀನಾಮೆ ಕೊಡುತ್ತಾರೆ, ಅಧಿಕಾರಿಗಳು ರಾಜೀನಾಮೆ ಕೊಡುತ್ತಾರೆ, ಆದರೆ ನಾಗೇಗೌಡರು ಯಾವಾಗ ರಾಜೀನಾಮೆಯನ್ನು ಕೊಡುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಯು.ಬಿ. ಸಭಾಪತಿ : ಮಾನ್ಯ ಅಧ್ಯಕ್ಷರೆ, ಮೂವರು ಮಂತ್ರಿಗಳು ರಾಜೀನಾಮೆ ಕೊಟ್ಟು ಸದನಕ್ಕೆ ಬರುತ್ತಿಲ್ಲ. ಅವರ ಬಗ್ಗೆ ಶಿವಕುಮಾರ್‌ರವರು ಮಾತನಾಡುತ್ತಿಲ್ಲ.

ಅಧ್ಯಕ್ಷರು : ಶಿವಕುಮಾರ್‌ರವರೆ, ನೀವು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಈಗ ನಾಗೇಗೌಡರು ಇಲ್ಲಿಯೇ ಇದ್ದಾರೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತೇನೆ. ಸರ್ಕಾರದ ಗಮನಕ್ಕೆ ಬಂದಿದ್ದರೆ ಸರ್ಕಾರದ ನಿಲುವೇನು ಎಂಬ ಬಗ್ಗೆ ನಾನು ಕೇಳುತ್ತೇನೆ. ಅವರು ಏನು ಹೇಳುತ್ತಾರೆ ಎಂಬುದನ್ನು ನೀವು ತಿಳಿದ ಮೇಲೆ ಮತ್ತೆ ಪ್ರತಿಕ್ರಿಯಿಸುವಿರಂತೆ. ಈಗ ನಾಗೇಗೌಡರೇ ಸರ್ಕಾರದ ಅಭಿಪ್ರಾಯ ತಿಳಿಸಿ.

ಶ್ರೀ. ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕೆ.ಸಿ. ರೆಡ್ಡಿಯವರು ನಮ್ಮ ರಾಜ್ಯದ ನೀರಾವರಿಗೆ ಸಂಬಂಧಪಟ್ಟಂತೆ ತಾಂತ್ರಿಕ ಸಲಹೆಗಾರರಾಗಿ ಚೆನ್ನಾಗಿ ಕೆಲಸ ಮಾಡಿದ್ದಾರಲ್ಲದೆ ಪ್ರಾಮಾಣಿಕರೂ ಆಗಿದ್ದಾರೆ. ಇದರ ಬಗ್ಗೆ ಎರಡನೆಯ ಮಾತೇ ಇಲ್ಲ. ಆದರೆ ಸದಸ್ಯರನ್ನು ಬದಲಾಯಿಸುವ ಹಕ್ಕು ಸರ್ಕಾರಕ್ಕೆ ಇದೆ. ಇದು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್.

ಆದರೆ ನಾವಿಲ್ಲಿ ಅವರಿಗೆ ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ. ಅವರೇ ಸ್ವತಃ ರಾಜೀನಾಮೆಯನ್ನು ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರಂತೆ. ನನಗಂತೂ ಕೊಟ್ಟಿಲ್ಲ. ಅವರು ಮುಂದುವರಿದುಕೊಂಡು ಹೋಗಬೇಕೆಂಬುದೇ ಸರ್ಕಾರದ ಹಾಗೂ ನನ್ನ ಇಚ್ಛೆಯಾಗಿದೆ. ಇದರ ಬಗ್ಗೆ ನಾನೇ ಅವರನ್ನು ಕರೆಯಿಸಿ ಮಾತನಾಡಿ ಮುಂದುವರೆದುಕೊಂಡು ಹೋಗಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಶಿವಕುಮಾರ್‌ರವರೇ, ಪ್ರಾಬ್ಲಮ್ ಸಾಲ್ವ್ ಆಯಿತು. ಶ್ರೀಮಾನ್ ಕೆ.ಸಿ. ರೆಡ್ಡಿಯವರು ನನಗೂ ಪರಿಚಿತರಾಗಿದ್ದಾರೆ. ನನಗೂ ಆಪ್ತರಾಗಿದ್ದಾರೆ. ನಾನೂ ಕೂಡ ಅವರನ್ನು ಕರೆಯಿಸಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅದನ್ನು ಸರಿಪಡಿಸಿಕೊಂಡು ಜವಾಬ್ದಾರಿಯನ್ನು ರಾಜ್ಯದ ಪರವಾಗಿ ನೀವು ನಿರ್ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಮುಖ್ಯಮಂತ್ರಿಗಳಿಗೂ ಮನವರಿಕೆ ಮಾಡಿಕೊಡುತ್ತೇನೆ. ಸಧ್ಯಕ್ಕೆ ಇದನ್ನು ಇಲ್ಲಿಗೇ ಕೈಬಿಡೋಣ.

ಶ್ರೀ. ಜಿ.ಬಿ. ಶಿವಕುಮಾರ್ : ಅಧ್ಯಕ್ಷರೆ, 2000 ಇಸವಿಯೊಳಗೆ ಕೃಷ್ಣಾ ನೀರು ಪೂರ್ಣ ಬಳಕೆಯಾಗಬೇಕಾದರೆ ಕೆ.ಸಿ. ರೆಡ್ಡಿಯವರು ಹಾಕಿಕೊಟ್ಟಂಥ ಮೇಲ್ಪಂಕ್ತಿಯನ್ನು ಅದೇ ರೀತಿಯಲ್ಲಿಯೇ ಅನುಸರಿಸಿಕೊಂಡು ಸರ್ಕಾರ ಹೋಗಬೇಕು. ಶ್ರೀ ಕೆ.ಸಿ. ರೆಡ್ಡಿಯವರ ಹಿಂದೆ ಇದ್ದಂಥ ಸದಸ್ಯರನ್ನೂ ಕೂಡ ಸರ್ಕಾರ ಮುಂದುವರಿಸಿಕೊಂಡು ಹೋಗಬೇಕು. ಏಕೆಂದರೆ ರಾಜ್ಯ ಕಂಡ ಒಬ್ಬ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯನ್ನು ಈ ಸರ್ಕಾರ ಉಳಿಸಿಕೊಳ್ಳುವುದಕ್ಕೆ ಯೋಗ್ಯತೆಯನ್ನು ಹೊಂದಿಲ್ಲವೆಂದರೆ ನಗೆಪಾಟಿಲಿಗೆ ಅವಕಾಶ ಕೊಟ್ಟಂತೆ ಆಗುತ್ತದೆ.

ಅಧ್ಯಕ್ಷರು : ಶಿವಕುಮಾರ್‌ರವರೆ, ಶ್ರೀಮಾನ್ ಕೆ.ಸಿ. ರೆಡ್ಡಿಯವರು ಒಂದು ಎತ್ತರಕ್ಕೆ ತಲುಪಿರತಕ್ಕಂಥ ಗೌರವಾನ್ವಿತ ವ್ಯಕ್ತಿಗಳಾಗಿದ್ದಾರೆ. ಅವರ ವಿಚಾರವನ್ನು ತಾವು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ನಾವೆಲ್ಲರೂ ಕೂಡ ಒಕ್ಕೊರಲಿನಿಂದ ಅವರು ಮುಂದುವರಿಯಲೇಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ. ಸರ್ಕಾರ ಕೂಡ ಅದಕ್ಕೆ ಸ್ಪಂದಿಸಿದೆ. ಇನ್ನು ಸದಸ್ಯರುಗಳ ಬಗ್ಗೆ ಸದನದಲ್ಲಿ ಚರ್ಚೆ ಮಾಡುವ ಹಂತಕ್ಕೆ ಹೋಗುವುದು ಬೇಡ. ಆದರೆ ಈ ವಿಷಯದ ಬಗ್ಗೆ ಕೆ.ಸಿ. ರೆಡ್ಡಿಯವರನ್ನು ನಾನೇ ಕರೆಸಿ ಮಾತನಾಡುತ್ತೇನೆ. ಉಳಿದ ಮೊಡಾಲಿಟೀಸನ್ನು ಅವರು, ಮುಖ್ಯಮಂತ್ರಿಗಳು ಮತ್ತು ನಾಗೇಗೌಡರು ಕುಳಿತುಕೊಂಡು ಮಾತನಾಡುತ್ತಾರೆ.

ಶ್ರೀ. ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) : ಆ ಕಮಿಟಿಯ ಅಧ್ಯಕ್ಷ ಪದವಿಗೆ ಚುನಾಯಿತ ಪ್ರತಿನಿಧಿ ಅಲ್ಲದವರನ್ನು ಹಾಗೂ ಸಚಿವರೂ ಕೂಡ ಆಗದೇ ಇರುವವರೊಬ್ಬರನ್ನು ಹಿಂದೆಲ್ಲಾ ಕೂಡಿಸಿದ್ದಾರೆ. ಮಾನ್ಯ ವೀರಪ್ಪಮೊಯ್ಲಿಯವರ ಕಾಲದಲ್ಲೂ ಕೂಡ ಬಾಳೆಕುಂದ್ರಿ ಎನ್ನುವ ತಜ್ಞರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಅದೇ ರೀತಿಯಲ್ಲಿ ವೀರೇಂದ್ರ ಪಾಟೀಲರು, ಬಂಗಾರಪ್ಪನವರು ಮತ್ತು ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ಸಚಿವರಲ್ಲದವರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಿಕೊಂಡು ಬಂದಿದ್ದಾರೆ. ನೀವು ಬೇಕಾದರೆ ಇತಿಹಾಸವನ್ನು ನೋಡಬಹುದು. ಆದರೆ ಇನ್ನು ಕೇವಲ ಆರು ತಿಂಗಳಿರುವಾಗ ಕೆ.ಸಿ. ರೆಡ್ಡಿಯವರನ್ನು ಇವರು ಕಿತ್ತುಹಾಕಿದ್ದಾರೆ ಮತ್ತು ಇಬ್ಬರು ಸದಸ್ಯರನ್ನೂ ತೆಗೆದಿದ್ದಾರೆ. ಈ ಅವಶ್ಯಕತೆ ಏನಿತ್ತು ಎಂಬುದನ್ನು ದಯಮಾಡಿ ಸರ್ಕಾರ ಹೇಳಬೇಕು.

ಅಧ್ಯಕ್ಷರು : ಪುಟ್ಟೇಗೌಡರೆ, ಶ್ರೀಮಾನ್ ಕೆ.ಸಿ. ರೆಡ್ಡಿಯವರು ಪ್ರಾಮಾಣಿಕರು, ನಿಷ್ಠಾವಂತರೆಂದು ಸರ್ಕಾರವೇ ಹೇಳಿದೆಯಲ್ಲದೆ ಅವರನ್ನು ಕರೆಸಿ ಮುಂದುವರೆದುಕೊಂಡು ಹೋಗಬೇಕೆಂದು ವಿನಂತಿ ಮಾಡಲಾಗುವುದೆಂದು ನಾಗೇಗೌಡರೇ ಸರ್ಕಾರದ ಪರವಾಗಿ ಹೇಳಿದ್ದಾರೆ. ಕೆ.ಸಿ. ರೆಡ್ಡಿಯವರ ರಾಜೀನಾಮೆ ಪತ್ರ ಸಧ್ಯಕ್ಕೆ ಮುಖ್ಯಮಂತ್ರಿಗಳಿಗೆ ಹೋಗಿದೆ. ಸರ್ಕಾರವೇ ಈ ರೀತಿ ಉತ್ತರ ಕೊಟ್ಟಿರುವುದರಿಂದ ಮತ್ತೆ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ. ಪಿ.ಎನ್. ಪುಟ್ಟೇಗೌಡ : ಕೊಡಬಾರದ ಹಿಂಸೆಯನ್ನೆಲ್ಲಾ ಕೊಟ್ಟು ಈಗ ಕೇವಲ ಬಾಯಿಯಲ್ಲಿ ಅವರು ಪ್ರಾಮಾಣಿಕರು ಎಂದುಬಿಟ್ಟರೆ ನಾವು ಒಪ್ಪಿಕೊಳ್ಳಬೇಕೇ? ನೀವಾದರೂ ದಯಮಾಡಿ ಹಿಂದಿನ ಇತಿಹಾಸವನ್ನು ತೆಗೆದುನೋಡಿ. ಯಾವುದೇ ಕಾಲದಲ್ಲೂ ಕೂಡ ಆ ಕಮಿಟಿಗೆ ಸಚಿವರಲ್ಲದವರನ್ನೇ ಅಧ್ಯಕ್ಷರನ್ನಾಗಿ ಮಾಡಿರುವುದು.

ಶ್ರೀ. ಪಿ. ಬೈರೇಗೌಡ : ಅಧ್ಯಕ್ಷರೆ, ಕೆ.ಸಿ. ರೆಡ್ಡಿಯವರನ್ನು ಕರೆಸಿ ರಾಜೀನಾಮೆಯನ್ನು ವಾಪಸ್ ಪಡೆಯುವಂತೆ ಮನವಿ ಮಾಡುವುದಾಗಿ ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಅವರು ನನಗೂ ಕೂಡ ಪರಿಚಯಸ್ಥರೇ. ತಾವೂ ಕೂಡ ಪರಿಚಯ ಹೊಂದಿದವರಾಗಿರುವುದರಿಂದ ತಮ್ಮ ವರ್ಚಸ್ಸನ್ನೂ ಕೂಡ ಬಳಸಿ ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡುವುದಾಗಿ ಹೇಳಿದ್ದೀರಿ. ಇಷ್ಟೆಲ್ಲಾ ಹೇಳಿದ್ದರೂ ಕೂಡ ಮತ್ತೆ ಚರ್ಚೆ ಮಾಡಲು ಇನ್ನೇನು ಉಳಿದಿದೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಪುಟ್ಟೇಗೌಡರೇ, ಇಂದಿನ ವ್ಯವಸ್ಥೆಯೊಳಗೆ ನಮ್ಮ ಮನಸ್ಸಿಗೆ ಹಿಡಿಸುವ ಹಾಗೆ ಮತ್ತು ನನಗೆ ಅನುಕೂಲವಾಗುವ ಹಾಗೆ ಎಲ್ಲವೂ ನಡೆಯುವುದಿಲ್ಲ. ರಾಜ್ಯದ ಹಿತ ಮುಖ್ಯವೆನ್ನುವಾಗ ಸ್ವಲ್ಪಮಟ್ಟಿಗೆ ನಾವು ಮುಜುಗರಕ್ಕೆ ಒಳಗಾಗಬೇಕಾಗುತ್ತದೆ. ಹಾಗೇನಾದರೂ ಕೆ.ಸಿ. ರೆಡ್ಡಿಯವರಿಗೆ ನೋವಾಗಿದ್ದರೆ ನಾನು ಅವರನ್ನು ಕರೆಯಿಸಿ ಮಾತನಾಡುತ್ತೇನೆ.

ಶ್ರೀ ಪಿ.ಎನ್. ಪುಟ್ಟೇಗೌಡ : ಇಷ್ಟು ಆತುರದಲ್ಲಿ ಇಬ್ಬರು ಸದಸ್ಯರನ್ನು ಬದಲಾಯಿಸುವ ಅವಶ್ಯಕತೆಯಾದರೂ ಏನಿತ್ತು ಎಂಬುದನ್ನು ಸರ್ಕಾರ ಸದನಕ್ಕೆ ತಿಳಿಸಬೇಕು.

(ಆ) ರಾಜ್ಯದ ಮೂರುಜನ ಮಂತ್ರಿಗಳು ರಾಜೀನಾಮೆ ನೀಡಿರುವುದು

ಶ್ರೀ. ಯು.ಆರ್. ಸಭಾಪತಿ (ಉಡುಪಿ) : ಈ ಅಧಿವೇಶನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಮೂವರು ಮಂತ್ರಿಗಳು ಸದನಕ್ಕೆ ಬಂದೇ ಇಲ್ಲ. ಅವರುಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ರಾಜೀನಾಮೆ ಕೊಟ್ಟಿದ್ದರೆ ಅದು ಆಕ್ಸ್‌ಫರ್ಡ್ ಆಗಿದೆಯೇ ಎಂಬ ಬಗ್ಗೆ ಸರ್ಕಾರ ತಿಳಿಸಬೇಕು. ಈ ಅಧಿವೇಶನಕ್ಕೆ ಅವರುಗಳು ಬರದೇ ಇರುವುದು ಸದನಕ್ಕೆ ಮತ್ತೂ ಅಗೌರವ ಸೂಚಿಸಿದ ಹಾಗೆ ಎಂದು ಹೇಳಬಯಸುತ್ತೇನೆ.

ಶ್ರೀ. ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ನನಗೆ ಒಂದು ಸಂಶಯ ಬರುತ್ತಿದೆ. ಸನ್ಮಾನ್ಯ ಕೆ.ಸಿ. ರೆಡ್ಡಿಯವರು ರಾಜೀನಾಮೆಯನ್ನು ಕೊಡತಕ್ಕಂಥ ಪರಿಸ್ಥಿತಿ ಏಕೆ ಉದ್ಭವವಾಯಿತು?